# ಫೆಬ್ರುವರಿ ಯಂಗ್ ಹಂಗಾಮ!


ಲವ್ ಆಜ್ ಕಲ್ 2

2020ನೇ ವರ್ಷ ಬಾಲಿವುಡ್ ಪಾಲಿಗೆ ಭರ್ಜರಿಯಾಗಿಯೇ ಆರಂಭಗೊಂಡಿದೆ. ಜನವರಿಯಲ್ಲಿ ತೆರೆಕಂಡ ಅಜಯ್ ದೇವಗನ್ ಮತ್ತು ಸೈಫ್ ಅಲಿ ಖಾನ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ 'ತಾನಾಜಿ: ದಿ ಅನ್ಸಂಗ್ ವಾರಿಯರ್' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಜೋರಾಗಿಯೇ ಸದ್ದು ಮಾಡಿದೆ. ಜೊತೆಗೆ ಆ್ಯಸಿಡ್ ದಾಳಿ ಸಂತ್ರಸ್ಥೆ ಲಕ್ಷ್ಮೀ ಅಗರ್‌ವಾಲ್ ಅವರ ಜೀವನಕಥೆಯನ್ನು ಆಧರಿಸಿದ ದೀಪಿಕಾ ಪಡುಕೋಣೆ ನಟಿಸಿದ್ದ 'ಛಪಾಕ್' ಸಿನಿಮಾ ಕೂಡ ಸಾಕಷ್ಟು ಮೆಚ್ಚುಗೆ ಗಳಿಸಿದೆ. ಕಂಗನಾ ರನೋಟ್ ಅಭಿನಯದ 'ಪಂಗಾ' ಸಿನಿಮಾ ಕೂಡ ಪ್ರೇಕ್ಷಕರ ಬಾಯಲ್ಲಿ ಓಕೆ ಓಕೆ ಅನಿಸಿಕೊಂಡಿದೆ.

ಹಾಗಾದರೆ ಬಿ ಟೌನ್ ಪಾಲಿಗೆ ಫೆಬ್ರುವರಿ ಹೇಗಿರುತ್ತದೆ? ಈ ತಿಂಗಳಲ್ಲಿಯೂ ಸಿನಿಪ್ರವಾಹ ಜೋರಾಗಿಯೇ ಇರುವ ಸೂಚನೆಗಳು ಕಾಣಿಸುತ್ತಿವೆ. ಹಾಗೆಂದು ಯಾವ ದೊಡ್ಡ ಸ್ಟಾರ್‌ಗಳ ಸಿನಿಮಾವೂ ಈ ತಿಂಗಳಲ್ಲಿ ಬಿಡುಗಡೆಯಾಗುತ್ತಿಲ್ಲ. ಹಾಗಾದರೆ ಪ್ರವಾಹದ ಮಾತೆಲ್ಲಿ? ಈ ಹರಿಯುವಿಕೆಯ ಹಿಂದಿರುವವರು ಹೊಸ ಹುಡುಗರು. ಹೊಸ ತಲೆಮಾರಿನ ನಟರ ಸಾಲು ಸಾಲು ಸಿನಿಮಾಗಳು ಫೆಬ್ರುವರಿಯಲ್ಲಿ ತೆರೆಕಾಣುತ್ತಿರುವುದರಿಂದ ಈ ಪ್ರವಾಹ ತಾರುಣ್ಯದ ಜೀವಂತಿಕೆಯಿಂದಲೂ ಹೊಳೆಯುವುದರಲ್ಲಿ ಅನುಮಾನವಿಲ್ಲ. ಹಾಗಾದರೆ ಯಾವ್ಯಾವ ಸಿನಿಮಾಗಳು ಕ್ಯೂನಲ್ಲಿವೆ?

ಕಾರ್ತಿಕ್ ಆರ್ಯನ್, ವಿಕ್ಕಿ ಕೌಶಲ್, ಆಯುಷ್ಮಾನ್ ಖುರಾನಾ ಮತ್ತು ಆದಿತ್ಯ ರಾಯ್ ಕಪೂರ್ ಸಿನಿರಸಿಕರನ್ನು ರಂಜಿಸಲು ಕಣಕ್ಕಿಳಿಯುತ್ತಿರುವ ನಟರು. ಇವರ ಜೊತೆಗೆ ತೆರೆಯ ಮೇಲೆ ಮಿಂಚು ಹರಿಸಲು ದಿಶಾ ಪಟಾನಿ, ಸಾರಾ ಅಲಿಖಾನ್, ಭೂಮಿ ಪೆಡ್ನೇಕರ್ ಕೂಡ ಸಿನಿಮಾದ ಮೂಲಕ ಬರುತ್ತಾರೆ.

ಈ ನಟರ ಎಲ್ಲ ಸಿನಿಮಾಗಳೂ ಒಂದಕ್ಕಿಂತ ಇನ್ನೊಂದು ಭಿನ್ನ ಜಾನರ್‌ನವು. ಕಾರ್ತಿಕ್ ಮತ್ತು ಸಾರಾ ಅಲಿ ಖಾನ್ ಜೊತೆಯಾಗಿ ನಟಿಸುತ್ತಿರುವ 'ಲವ್ ಆಜ್ ಕಲ್ 2' ಸಿನಿಮಾ ರೊಮ್ಯಾಂಟಿಕ್ ಲವ್ ಸ್ಟೋರಿ. ರಿಯಲ್ ಲೈಫ್‌ನಲ್ಲೂ ಡೇಟಿಂಗ್ ಗೀಟಿಂಗ್ ಎಂದು ಚುಕ್ಕಿ ಚಂದ್ರಮ ಆಟ ಆಡುತ್ತಿರುವ ಸಾರಾ ಮತ್ತು ಕಾರ್ತಿಕ್ ತೆರೆಯ ಮೇಲೂ ಪುಳಕದ ಅಲೆ ಎಬ್ಬಿಸುವ ವಿಶ್ವಾಸದಲ್ಲಿದ್ದಾರೆ. ಇಮ್ತಿಯಾಜ್ ಅಲಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಮೋಹಿತ್ ಸೂರಿ ನಿರ್ದೇಶನದ 'ಮಲಾಂಗ್' ಈ ತಿಂಗಳು ತೆರೆಕಾಣುತ್ತಿರುವ ಇನ್ನೊಂದು ಚಿತ್ರ. ಈ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾಗೆ ಆದಿತ್ಯ ರಾಯ್ ಕಪೂರ್ ನಾಯಕ. ದಿಶಾ ಪಟಾನಿ ಹಾಟ್ ಪಟಾಕಿ ಕೂಡ ಜೊತೆಗಿದೆ. ಅಂದಮೇಲೆ ಫೆ. 7ರಂದು ತೆರೆಗೆ ಬರಲು ಸಜ್ಜಾಗಿರುವ ಈ ಚಿತ್ರ ಗಲ್ಲಾಪೆಟ್ಟಿಗೆ ದೋಚಲು ಪಡ್ಡೆಗಳ ಶಿಳ್ಳೆಯೇ ಸಾಕಲ್ಲವೇ?

ವಿಶಿಷ್ಟ ಮತ್ತು ಸೂಕ್ಷ್ಮ ಸಂವೇದನೆಯ ಸಿನಿಮಾಗಳಿಂದಲೇ ಗಮನಸೆಳೆದಿರುವ ಆಯುಷ್ಮಾನ್ ಖುರಾನಾ ಸಿನಿಮಾ ಎಂದರೆ ಕಾತರದಿಂದ ಕಾಯುವ ಒಂದು ವರ್ಗವೇ ಸೃಷ್ಟಿಗೊಂಡಿದೆ. ಅವರಿಗೆ ಈ ತಿಂಗಳಲ್ಲಿ ಆಯುಷ್ಮಾನ್ ಹೊಸ ರೆಸಿಪಿಯೊಂದಿಗೆ ಬರಲಿದ್ದಾರೆ. ಈ ಸಿನಿಮಾದ ಹೆಸರು 'ಶುಭ ಮಂಗಳ್ ಜ್ಯಾದಾ ಸಾವಧಾನ್'. ಈ ಚಿತ್ರದಲ್ಲಿ ಅವರು ಸಲಿಂಗಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಆಯುಷ್ಮಾನ್ ಜೊತೆಗೆ ಜಿತೇಂದ್ರ ಕುಮಾರ್ ತೆರೆ ಹಂಚಿಕೊಳ್ಳುತ್ತಿರುವ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿರುವುದು ಕೈವಲ್ಯ. ಫೆ. 21ಕ್ಕೆ ಈ ಚಿತ್ರ ತೆರೆಗೆ ಬರಲಿದೆ.


ಭೂತ್ ಪಾರ್ಟ್ ಒನ್: ದಿ ಹಂಟೆಡ್ ಶಿಪ್

ಆಯುಷ್ಮಾನ್ ಬಿಟ್ಟರೆ ವಿಕ್ಕಿ ಕೌಶಿಲ್ ಅವರ ಹೆಸರೇ ಜೋರು ಚಾಲ್ತಿಯಲ್ಲಿದೆ. 'ಉರಿ' ಸಿನಿಮಾದ ಭರ್ಜರಿ ಹಿಟ್ ಮತ್ತು ರಾಷ್ಟ್ರಪ್ರಶಸ್ತಿಗಳ ಮನ್ನಣೆಯ ಬೆಂಬಲವನ್ನು ಬೆನ್ನಿಗಿಟ್ಟುಕೊಂಡಿರುವ ಅವರು ಭೂತದ ಕಥೆಯ ಜೊತೆಗೆ ಬರುತ್ತಿದ್ದಾರೆ. ಚಿತ್ರದ ಹೆಸರು 'ಭೂತ್ ಪಾರ್ಟ್ ಒನ್: ದಿ ಹಂಟೆಡ್ ಶಿಪ್'. 'ಶುಭ್ ಮಂಗಳ್ ಜ್ಯಾದಾ ಸಾವಧಾನ್' ಸಿನಿಮಾ ಬಿಡುಗಡೆಯ ದಿನವೇ ಈ ಚಿತ್ರವೂ ಬಿಡುಗಡೆಯಾಗುತ್ತಿದೆ. ವಿಕ್ಕಿ ಜೊತೆ ಭೂಮಿ ಪೆಡ್ನೇಕರ್ ನಟಿಸುತ್ತಿರುವ ಈ ಚಿತ್ರದ ನಿರ್ದೇಶಕರು ಭಾನು ಪ್ರತಾಪ್ ಸಿಂಗ್. ■


ಮಲಾಂಗ್


ಶುಭ ಮಂಗಳ್ ಜ್ಯಾದಾ ಸಾವಧಾನ್